**<u>ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳರವರ ನ್ಯಾಯಾಲಯ, ದಾಂಡೇಲಿ</u>**

**<u>ಸಿ.ಸಿ ನಂಃ 722/2025</u>**

**ಪಿರ್ಯಾದಿದಾರರುಃ ಕರ್ನಾಟಕ ಸರ್ಕಾರದ ಪರವಾಗಿ**

**ರಾಮನಗರ ಪೋಲಿಸ್ ಠಾಣೆ,**

**-ವಿರುದ್ಧ-**

**ಆರೋಪಿಃ ಸಾಗರ ನೀಲಕಂಠ ಜಾಧವ,**

ವಯಸ್ಸುಃ 35 ವರ್ಷ, ಉದ್ಯೋಗಃ ಟೈಲ್ಸ್ ಪಿಟಿಂಗ್ ಕೆಲಸ,

ಸಾಃ ಲಕ್ಷ್ಮೀಗಲ್ಲಿ, ಬೋಕನೂರ, ಬೆಳಗಾವಿ.

**ಆರೋಪಿಯಾದ ನಿಮ್ಮ ವಿರುದ್ಧ ಈ ಕೆಳಗಿನಂತೆ ನಾನು ಹೊರಿಸಿರುವಃ,**

**<u>ಆಪಾದನೆ</u>**

ದಿನಾಂಕಃ 09-11-2025 ರಂದು 16-00 ಗಂಟೆಯ ಸುಮಾರಿಗೆ ರಾಮನಗರ ಪೋಲೀಸ ಠಾಣಾ ವ್ಯಾಪ್ತಿಯಲ್ಲಿ ಬರುವ ಜೋಯಿಡಾ ತಾಲೂಕ ಕೂಡಲಗಾಂವ ಗ್ರಾಮದಲ್ಲಿರುವ ಪಿಂಟೋ ದೇಸಾಯಿ ರವರ ಮನೆಗೆ ಹೋಗಲು ಪಿರ್ಯಾದಿ ಮತ್ತು ಆರೋಪಿಯಾದ ನೀವು ನಿಮ್ಮ ಸ್ಕೂಟಿ ನಂಬರ ಕೆಎ-22-ಎಚ್-ವಿ-3192 ನೇದರಲ್ಲಿ ಹೋಗುತ್ತಿದ್ದಾಗ ಆರೋಪಿಯಾದ ನೀವು ನಿಮ್ಮ ಸ್ಕೂಟಿಯನ್ನು ತಿರುವುಗಳಿಂದ ಕೂಡಿದ ರಾಮನಗರ-ಜೋಯಿಡಾ ರಸ್ತೆಯಲ್ಲಿ ಅತಿವೇಗವಾಗಿ ಹಾಗೂ ಅಜಾಗರೂಕತೆಯಿಂದ ಚಲಾಯಿಸಿಕೊಂಡು ಹೋಗಿ, ಜಗಲಬೇಟ ಗ್ರಾಮದ ತಿರುವಿನಲ್ಲಿ ಆಕಳು ಅಡ್ಡವಾಗಿ ಬಂದಾಗ ನಿಯಂತ್ರಣ ಕಳೆದುಕೊಂಡು ಒಮ್ಮೆಲೆ ಬ್ರೇಕ್ ಹಾಕಿ, ಅಪಘಾತ ಪಡಿಸಿಸುವ ಮೂಲಕ ಭಾರತೀಯ ನ್ಯಾಯ ಸಂಹಿತೆ ಕಲಂ 281 ಕಾಯ್ದೆಯಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞೆಯಲ್ಲಿ ಮಾಡಿರುತ್ತೀರೆಂದು,

ಎರಡನೇಯದಾಗಿ ಮೇಲ್ಕಾಣಿಸಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿಯಾದ ನೀವು ಮತ್ತು ಪಿರ್ಯಾದಿಯು ನಿಮ್ಮ ಸ್ಕೂಟಿಯ ಹಿಂಬದಿಯಲ್ಲಿ ಕುಳಿತು ಹೋಗುತ್ತಿರುವಾಗ ಅಪಘಾತ ಪಡಿಸಿ, ಪಿರ್ಯಾದಿಯು ಸ್ಕೂಟಿಯ ಮೇಲಿಂದ ಬಿದ್ದು, ತಲೆಯ ಬಲಭಾಗ, ಹಣೆಯ ಬಲಭಾಗ, ಬಲಗಣ್ಣಿನ ಕೆಳಭಾಗದಲ್ಲಿ, ಗದ್ದದ ಭಾಗದಲ್ಲಿ ಸಣ್ಣ ರಕ್ತ ಗಾಯಗಳು ಹಾಗೂ ಎರಡು ಕೈಗಳ ಅಂಗೈ, ಮುಂಗೈ

ಭಾಗದಲ್ಲಿ, ಬಲಗಾಲಿನ ಮೊಣಗಂಟಿನ ಭಾಗದಲ್ಲಿ ತೆರಚಿದ ಗಾಯ, ತೀವ್ರ ಸ್ವರೂಪದ ಗಾಯನೋವುಪಡಿಸುವ ಮೂಲಕ ಭಾರತೀಯ ನ್ಯಾಯ ಸಂಹಿತೆ ಕಲಂ 125(ಬಿ) ಕಾಯ್ದೆಯಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞೆಯಲ್ಲಿ ಮಾಡಿರುತ್ತೀರೆಂದು, ನಿಮ್ಮ ಮೇಲೆ ಆಪಾದನೆ ಮಾಡಲಾಗಿದೆ.

ಮೇಲ್ಕಂಡ ಅಪರಾಧಗಳ ಬಗ್ಗೆ ವಿಚಾರಣೆಯು ಇದೇ ನ್ಯಾಯಾಲಯದ ವ್ಯಾಪ್ತಿಗೆ ಹಾಗೂ ನನ್ನ ಸಂಜ್ಞೆಗೆ ಒಳಪಡುವುದರಿಂದ ಸದರಿ ಅಪರಾಧಗಳ ಬಗ್ಗೆ ವಿಚಾರಣೆಯನ್ನು ಇದೇ ನ್ಯಾಯಾಲಯದಲ್ಲಿ ನಡೆಸಲು ಈ ಮೂಲಕ ನಿರ್ದೇಶಿಸುತ್ತಿದ್ದೇನೆ.

**ಆರೋಪಿಯ ಹೇಳಿಕೆ**

**ಪ್ರಶ್ನೆ: 1:** ಈಗ ಓದಿ ಹೇಳಿದ ಆಪಾದನೆ ನಿಮಗೆ ತಿಳಿಯಿತೇ?

**ಉತ್ತರ:**

**ಪ್ರಶ್ನೆ: 2:** ಈ ಆಪಾದನೆಯ ಬಗ್ಗೆ ನೀವು ನಿಮ್ಮ ತಪ್ಪು ಒಪ್ಪಿಕೊಳ್ಳುತ್ತೀರೋ ಅಥವಾ ವಿಚಾರಣೆಯಾಗಬೇಕೇ ?

**ಉತ್ತರ**

(ಈ ಮೇಲಿನ ಆಪಾದನೆಯನ್ನು ಆರೋಪಿತನಿಗೆ ಅರ್ಥವಾಗುವ ಭಾಷೆಯಲ್ಲಿ ಓದಿ ಹೇಳಿದ ನಂತರ ಆರೋಪಿತ ನನ್ನ ಸಮಕ್ಷಮ ನೀಡಿದ ಉತ್ತರವನ್ನು ಯಥಾವತ್ತಾಗಿ ದಾಖಲು ಮಾಡಲಾಯಿತು)

**ಸಹಿ ಇದೆ/-**

ದಿನಾಂಕ: 06-03-2026 **ಪ್ರ.ದ.ನ್ಯಾ.ದಂಡಾಧಿಕಾರಿಗಳು**, **ದಾಂಡೇಲಿ**